ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಾಕ್ಷಿದಾರನ ಹೆಸರುಃ- ದೊಡ್ಡಮರಿಯಪ್ಪ
ತಂದೆ ಹೆಸರು ಃ- ಕೆಂಪಯ್ಯ
ವಯಸ್ಸು ಃ- 70 ವರ್ಷ
ಉದ್ಯೋಗ ಃ- ವ್ಯವಸಾಯ
ವಾಸ ಃ- ಹುರುಳಿಗೆರೆ

**ಸಾಕ್ಷಿಗೆ ದಿಃ 29.08.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಮೃತ ಚಿಕ್ಕಮ್ಮ ನನ್ನ ಮಗಳು ಇರುತ್ತಾರೆ. ಗಂಗಣ್ಣ ಎಂಬುವವರು ನನ್ನ ಅಳಿಯ ಇರುತ್ತಾರೆ. ಚಾಸಾ.2 ನನ್ನ ಮೊಮ್ಮಗಳು ಇರುತ್ತಾರೆ. ಸುಮಾರು 2 ವರ್ಷಗಳ ಹಿಂದೆ ಚಿಕ್ಕಮ್ಮ, ಗಂಗಣ್ಣ ಮತ್ತು ಉಮಾ ರವರುಗಳು ಬೈಕಿನಲ್ಲಿ ಮಾರ್ಕೋನಹಳ್ಳಿಯಿಂದ ಹುರುಳಿಗೆರೆಗೆ ಬರುತ್ತಿರುವಾಗ ಅವರಿಗೆ ಅಪಘಾತ ಆಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ಅಪಘಾತ ವಾದ ನಂತರ ನನಗೆ ಕರೆ ಬಂದಿದ್ದು ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಚಾಸಾ.3 ರವರು ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ನಾನು ನೇರ ಎಸಿಗಿರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆನಂತರ ಪಿರ್ಯಾದಿ ನೀಡಿರುತ್ತೇನೆ.

ಸಾಕ್ಷಿಯು ಪಿರ್ಯಾದಿಯಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಪಿರ್ಯಾದಿಯನ್ನು ನಿಪಿ.1 ಎಂದು ಗುರುತಿಸಲಾಯಿತು. ಯಾವ ವಾಹನದಿಂದ ಅವರಿಗೆ ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಳಿಯ ಚಲಾಯಿಸುತ್ತಿದ್ದವಾಹನ ನಂಬರ್ ಸಹ ಗೊತ್ತಿಲ್ಲ. ಅಪಘಾತವನ್ನು ಯಾರು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಪೋಲೀಸರು ಸಹ ಆರೋಪಿ ಯನ್ನು ತೋರಿಸಿರುವುದಿಲ್ಲ. ಒಂದು ಕಾರು ವೇಗವಾಗಿ ಬಂದು ಅಪಘಾತಪಡಿಸಿರುತ್ತದೆ ಎಂದು ಚಾಸಾ.3 ನನಗೆ ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 06.12.2020 ರಂದು ಬೆಳಗ್ಗೆ 11.30 ಸಮಯದಲ್ಲಿ ಚಿಕ್ಕಮ್ಮ, ಗಂಗಣ್ಣ ಮತ್ತು ಚಾಸಾ.2 ರವರು ಹುರುಳಿಗೆರೆಗೆ ಬರುತ್ತಿರುವಾಗ ನಾಗಸಂದ್ರ-ಸಿ ಎಸ್ ಪುರ ರಸ್ತೆಯಲ್ಲಿ ಒಂದು ಕಾರು ನಂ.ಕೆಎ-02-ಎಂಕೆ-166 ವಾಹನವು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಕೆಎ-41-ಕ್ಯು-4193 ಬೈಕಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಆಗ ನನ್ನ ಮಗಳು ಅಳಿಯ ಮತ್ತು ಮೊಮ್ಮಗಳು ಬೈಕಿನಿಂದ ಕೆಳಗೆ ಬಿದ್ದು ಅವರಿಗೆ ಬಾರಿ ಗಾಯಗಳಾಗಿರುತ್ತವೆ ಎಂದರೆ ಸರಿ. ಚಿಕಿತ್ಸೆ ಫಲಕಾರಿಯಾಗದೇ ಮರುದಿನ ನನ್ನ ಮಗಳು ಎಸಿಗಿರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿಯ ಅತಿವೇಗ ಮತ್ತು ಅಜಾಗರೂಕ ಚಾಲನೆಯಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಟಿ ಜಿ ಟಿ ವಕೀಲರಿಂದ**

ನಾನು ಅಪಘಾತ ಸ್ಥಳದಲ್ಲಿ ಇಲ್ಲದೇ ಇರುವುದರಿಂದ ಹೇಗೆ ಅಪಘಾತ ಆಯಿತು ಎಂದು ಹೇಳಲು ಆಗುವುದಿಲ್ಲ. ಅಪಘಾತವನ್ನು ಯಾರು ಮತ್ತು ಹೇಗೆ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಪರಿಹಾರಕ್ಕಾಗಿ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಬರೆದಿರುವ ಮಾಹಿತಿಗಳು ಗೊತ್ತಿಲ್ಲ. ಅವರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**